ಅಧ್ಯಕ್ಷರು.-- ತಾವು ಈ ರೀತಿ ಮಾಡುವುದು ಸರಿಯಲ್ಲ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್ -- ಸ್ವಾಮಿ ಇದು ತುಂಡನೆ ಮಾಡತಕ್ಕ ರೀತಿಯಲ್ಲಿ ಇರುವುದರಿಂದ ಮಾನ್ಯ ಗೃಹಮಂತ್ರಿಗಳು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು .....

ಶ್ರೀ ರಮೇಶ ಜಿಗಜಿಣಗಿ.-- ಮಾನ್ಯ ಸಭಾಪತಿಯವರೇ, ಶಾಸರಕರಾದ ಶ್ರೀ ಶಾನಪ್ಪನವರು ಹಾಗೂ ಶ್ರೀ ಕೃಷ್ಣಪ್ಪನರನರು ಬಿಜಾಪುರ ಜಿಲ್ಲೆಯ ಸಿಂಧಿಗಿತಾಲ್ಲೂಕಿನಲ್ಲಿ ನಡೆದಂಥ ಘಟನೆಯ ಬಗ್ಗೆ ಪ್ರಸ್ತಾಪಮಾಡಿದ್ದಾರೆ ಇದು ಸರ್ಕಾರದ ಗಮನಕ್ಕೆ ಬಂದಿದೆ. ನಾನೂ ಕೂಡಾ ಇದೇ ಜಿಲ್ಲೆಯವನಾಗಿರುವುದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪೋಲೀಸ್ ಅಧಿಕಾರಿಗಳಿಗೆ ಆದೇಶಿಸಿದ್ದೇನೆ.

10-00 A.M.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.-- ಸರ್ಕಾರಿ ಅಧಿಕಾರಿಗಳು ಕೊಟ್ಟ ವರದಿಯನ್ನು ಅವರು ಓದುತ್ತಿದ್ದಾರೆ

ಶ್ರೀ ರಮೇಶ ಜಿಗಜಿಣಗಿ.-- ಮಾನ್ಯ ಅಧ್ಯಕ್ಷರೇ, ಅವರೂ ಕೂಡಾ ಹಿಂದೆ ಮಂತ್ರಿಗಳು ಆಗಿದ್ದರು ಸರ್ಕಾರದ ಅಧಿಕಾರಿಗಳು ಕೊಟ್ಟಂಥ ವರದಿಯನ್ನು ಓದುತ್ತಿದ್ದರೋ ಅಥವಾ ಸ್ವತಃ ಓದುತ್ತಿದ್ದರೋ ಗೊತ್ತಿಲ್ಲ. ಇವೊತ್ತು ಈ ಘಟನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಚಿಂಚೋಳಿಯಲ್ಲಿ ಆನರಿಗೆ ರಕ್ಷಣೆ ಕೊಡುವುದಕ್ಕೆ ಜಿಲ್ಲಾ ಸೂಪರಿಟೆಂಡೆಂಟ್ ಆಫ್ ಪೋಲೀಸ್ ಆನರಿಗೆ ಕೂಡಲೇ ಸಂಪರ್ಕ ಮಾಡಿ ಹೇಳುತ್ತೇನೆ.

(iv) ಶಿವಮೊಗ್ಗಾ ಜಿಲ್ಲೆಯ ಕುಂಶಿಯಲ್ಲಿ ಮಲ್ಲಪ್ಪ ಎಂಬುವನು ತನ್ನ ಸೊಸೆ ಜಯಮ್ಮ ಎಂಬುನರ ಮೇಲೆ ಅತ್ಯಾಚಾರ ನಡೆಸಿ ನೇಣು ಹಾಕಿರುವ ಬಗ್ಗೆ.

ಶ್ರೀ ಆನಂದರಾವ್ -- ಶಿವಮೊಗ್ಗಾ ಜಿಲ್ಲೆಯ ಕುಂಶಿಯಲ್ಲಿ ತಾರೀಖು 11ರಂದು 45 ವರ್ಷದ ಫೈಲ್ವಾನ್ ಮಲ್ಲಪ್ಪ ಎಂಬುವನು ಆತನ ಸೊಸೆ ಜಯಮ್ಮ ಎಂಬುನರ ಮೇಲೆ ಅತ್ಯಾಚಾರ ನಡೆಸಿ ಅವಳನ್ನು ನೇಣು ಹಾಕಿದ್ದಾನೆಂದು ಗಲಾಟೆ ಆಗಿದೆ. ಆತನ ರಕ್ಷಣೆಗೆ ಕುಂಶಿ ಮಾಜಿ ಅಧ್ಯಕ್ಷರೊಬ್ಬರು ಪ್ರಭಾವ ಬೀರಿದ್ದಾರೆಂದು ಗೊತ್ತಾಗಿದೆ. ಒಮ್ಮೆ ನಾನು ಊರಿಗೆ ಭೇಟ ಕೊಟ್ಟಿದ್ದೆ. ಪರಿಶೀಲನೆ ಮಾಡಿದಾಗ, ಸುಮಾರು ಐದುನೂರರಿಂದ ಆರುನೂರು ಜನ ಈ ವ್ಯಕ್ತಿ ಬಹಳ ಕೆಟ್ಟ ನೀತಿಯುಳ್ಳವನು. ಆತ ಅತ್ಯಾಚಾರ ಮಾಡಿ ಕೊಲೆ ಮಾಡಿದ್ದಾನೆಂದು ಘೋಷಣೆ ಕೂಗುತ್ತಿದ್ದರು ಇದರ ಜೊತೆಗೆ ಆತನ ಅಣ್ಣ ಕೂಡಾ ಆತನ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾನೆ. ಈ ಊರಿನಲ್ಲಿ ಒಂದು ರೀತಿಯ ಭಯದವಾತಾವರಣ ಇದೆ. ಸರ್ಕಾರ ಈ ವಿಚಾರದಲ್ಲಿ ಕೂಡಲೇ ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ರಮೇಶ್ ಜಿಗಜಿಣಗಿ ಚಂದಪ್ಪ (ಗೃಹ ಇಲಾಖೆಯ ರಾಜ್ಯ ಸಚಿವರು) -- ಮಾನ್ಯ ಸಭಾಪತಿಗಳೇ ಈ ಒಂದು ಕೇಸಿನ ಬಗ್ಗೆ ನಮ್ಮ ಕುಂಶಿ ಪೋಲೀಸ್ ಸ್ಟೇಷನ್ನಿನಲ್ಲಿ ದೂರು ದಾಖಲಾಗಿದೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಇಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಕಾಯಿದೆ ಕಾನೂನು ಚೌಕಟ್ಟಿನಲ್ಲಿ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕೊ ಆ ರೀತಿಯ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ

ಶ್ರೀ ಬಿ. ಸ್ವಾಮಿರಾವ್.-- ಮಾನ್ಯ ಅಧ್ಯಕ್ಷರೇ, ಶಿವಮೊಗ್ಗಾ ಜಿಲ್ಲೆಯಲ್ಲಿ ಡಿ. ಎಲ್ ಆರ್. ಸಿ. ಕಮಿಟಿ ಏನು ನಡೆಯುತ್ತಿದೆ, ಅದರ ಬಗ್ಗೆ ಬಹಳ ಜನರ ಒಂದು ತೇಜೋವಧೆಯಾಗುತ್ತಾ ಇದೆ. ಶಿವಮೊಗ್ಗಾ ಜಿಲ್ಲೆಯಲ್ಲಿ ಜಿಲ್ಲಾ ಡಿ. ಎಲ್. ಆರ್. ಸಿ. ಕಮಿಟಿಯಲ್ಲಿ ಹಣ ಪಡೆದು ಆಭ್ಯರ್ಥಿಗಳನ್ನು ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಿಗೆ ಹಾಕುತ್ತಿದ್ದಾರೆ. ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆಯಾಗಿದೆ. ಈ ವಿಚಾರದಲ್ಲಿ ಹಿಂದಿನ ವಿಧಾನ ಸಭೆಯಲ್ಲಿ ನಾವು ಪ್ರಸ್ತಾಪ ಮಾಡಿದಾಗ ದಾಖಲೆ ಕೊಡಿ ಎಂದು ಕೇಳುತ್ತಾರೆ, ಯಾವ ರೀತಿಯ ದಾಖಲೆ ಕೊಡಬೇಕೋ ನನಗೆ ಗೊತ್ತಾಗುತ್ತಿಲ್ಲ ಇದು ಬಹಳ ನಾಚಿಕೆಗೇಡಿನ ಕೆಲಸ. ವಿದ್ಯಾಮಂತ್ರಿಗಳ ಹತ್ತಿರ ಹೋಗಿ ಹೇಳಿದಾಗ ನೀವು ಇಂದಿನದ್ದನ್ನು ಹಿಡಿದುಕೊಡಿ ಎಂದು ಹೇಳುತ್ತಾರೆಯೇ ವಿನಹ ಏನೂ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಶ್ರೀಮತಿ ಜಯಲಕ್ಷ್ಮಿ ಎನ್ನುವ ಹುಡುಗಿ ಮೊಸಲನೇ ದರ್ಜೆಯಲ್ಲಿ ಪಾಸಾಗಿದ್ದು, ಅವಳನ್ನು ಆರು ಸಾವಿರ ರೂಪಾಯಿಗಳ ಲಂಚ ಕೊಟ್ಟರೆ ಕೆಲಸ ಕೊಡುವುದಾಗಿ ಹೇಳಿದ್ದಾರಂತೆ. ಆಕೆ ನನಗೆ ಒಂದು ಕಾಗದ ಬರೆದು ತಿಳಿಸಿದ್ದಾರೆ. ಈ ತರಹ ಮೋಸ ನಡೆಯುತ್ತಿದೆ. ಆದ್ದರಿಂದ ತಾವು ಕೂಡಲೆ ಈ ಕಮಿಟಿಯನ್ನು ವಜಾ ಮಾಡಿ, ಹಲವಾರ,

ವರ್ಷಗಳಿಂದ ಕಾದು ಕುಳಿತಿರತಕ್ಕಂಥ ವಿದ್ಯಾರ್ಥಿಗಳಿಗೆ ನೌಕರಿಯನ್ನು ಒದಗಿಸಿಕೊಡುತ್ತೀರೆಂದು ಆಶಿಸಿ ಇದರ ಬಗೆ ಮಾನ್ಯ ಮಂತ್ರಿಯವರಿಂದ ಉತ್ತರವನ್ನು ಅಪೇಕ್ಷಿಸುತ್ತೇನೆ.

ಶ್ರೀ ಜೆ ಹೆಚ್. ಪಟೇಲ್ (ಮಾನ್ಯ ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).--ನೇಮಕಾತಿಯ ಸದಸ್ಯರಿಂದ ಭ್ರಷ್ಟಾಚಾರದ, ಅತ್ಯಾಚಾರದ ನಿರ್ದಿಷ್ಟವಾದ ಆರೋಪವನ್ನು ಮಾನ್ಯ ಸದಸ್ಯರು ಕೊಟ್ಟರೆ. ಕಮಿಟಿಯನ್ನು ನೇಮಕ ಮಾಡುವುದಷ್ಟೇ ಅಲ್ಲದೆ, ಬೇರೆ ಕ್ರಮವನ್ನೂ ಸಹ ತೆಗೆದುಕೊಳ್ಳುತ್ತೇವೆ.

ಒಬ್ಬ ಮಾನ್ಯ ಸದಸ್ಯರು.--ಮೊನ್ನೆ ನನ್ನ ಸಿರಗುಪ್ಪ ತಾಲ್ಲೂಕಿನಲ್ಲಿ ಸುಮಾರು 135 ರೈತರು ಅವರು ಬೆಳೆದಂಥ ಭತ್ತವನ್ನು ವೇರ್ ಹೌಸಿನಲ್ಲಿ ದಾಸ್ತಾನು ಮಾಡಿದಂಥ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಈ ಭತ್ತವನ್ನು ಸ್ವಾಧೀನಮಾಡಿಕೊಂಡಿದ್ದಾರೆ. ಆ ಸಂದರ್ಭದಲ್ಲಿ ಕೇವಲ 120 ಜನ ಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತಂದಿದ್ದಾರೆ. ಉಳಿದಂಥ ಬಾಕಿ 16 ಜನ ಸ್ಟೇ ತರತಕ್ಕ ಸಾಧ್ಯವಾಗಿಲ್ಲ. ಅದರಲ್ಲಿ 120 ಜನ ವ್ಯಾಪಾರಸ್ಥರು ಇರಬಹುದು. ಆದರೆ ಸರ್ಕಾರದವರಲ್ಲಿ ಸಿಬ್ಬಂದಿ ಕಡಿಮೆಯೇ ಇಲ್ಲ. ಯಾರು ವ್ಯಾಪಾರಸ್ಥರು ? ಯಾರು ವ್ಯಾಪಾರಸ್ಥರಲ್ಲವೋ ಎನ್ನುವ ಬಗೆ ಅಂಕಿಸಂಖ್ಯೆಗಳನ್ನು ತರಿಸಿಕೊಳ್ಳಬೇಕೆಂದು ಹೇಳುತ್ತೇನೆ. ಸುಮಾರು 40 ಸಾವಿರ ಕ್ವಿಂಟಾಲ್ ಭತ್ತವನ್ನು ಸ್ವಾಧೀನ ಮಾಡಿಕೊಂಡಿದ್ದಾರೆ. ಅಲ್ಲಿ ಬಹಳ ಗಲಾಟೆ ಪರಿಸ್ಥಿತಿ ಇತ್ತು. ನಾವು ಹೋಗಿ ನಿವಾರಿಸಿದ್ದೇವೆ. ಸುಮಾರು 50-60 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ 120 ಮಂದಿ ಸ್ಟೇ ತಂದಿದ್ದಾರೆ. ಇದು ಸರ್ಕಾರಕ್ಕೆ ಗೊತ್ತಿದೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ರೈತ ಲೆವಿ ಕೊಡತಕ್ಕಂಥ ಅವಶ್ಯಕತೆ ಇಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಜಿ. ಬಸವಣ್ಣಪ್ಪ (ಮಾನ್ಯ ಆಹಾರ ಖಾತೆಯ ಸಚಿವರು).--ಸನ್ಮಾನ್ಯ ಅಧ್ಯಕ್ಷರೇ, ಈಗತಾನೆ ಈ ಪ್ರಶ್ನೆಯ ಬಗೆ ನಾನು ಉತ್ತರವನ್ನು ಹೇಳಿದ್ದೇನೆ. ರೈತರ ಬಗೆ ಅನೇಕ ರಿಯಾಯಿತಿಗಳನ್ನು ಈಗಾಗಲೇ ಕೊಟ್ಟಿದ್ದೇವೆ 15 ಕ್ವಿಂಟಾಲ್ ಭತ್ತ 10 ಕ್ವಿಂಟಾಲ್ ಗೋಧಿಯ ಸ್ಟಾಕ್ ಇಟ್ಟುಕೊಳ್ಳಬಹುದು. ಉಳಿದದ್ದನ್ನು ಡಿಕ್ಲರೇಷನ್ ಮಾಡಬೇಕು. ರೈತರಿಗೆ ಹೆಚ್ಚು ಕಿರುಕುಳಕೊಡುವುದು ಬೇಡ ಎನ್ನುವ ದೃಷ್ಟಿಯಿಂದ ವಾಪಸು ತೆಗೆದುಕೊಂಡಿದ್ದೇವೆ ರೈತರ ಹೆಸರಿನಲ್ಲಿ ಮಿಲ್ ಮಾಲಿಕರು ವೇರ್ ಹೌಸಿನಲ್ಲಿ ಇನ್ಸ್ಪೆಕ್ಷನ್ ಸಂಸ್ಥೆಗಳಲ್ಲಿ ದಾಸ್ತಾನು ಇಡುವುದು ಬೆಳಕಿಗೆ ಬಂದಮೇಲೆ ಬಳ್ಳಾರಿಜಿಲೆಯ ಜಿಲ್ಲಾ ಕಾಥಿರಿಗಳವರ ನೇತೃತ್ವದಲ್ಲಿ ದಾಳಿನಡೆಸಿದಾಗ ಸಾವಿರಾರು ಕ್ವಿಂಟಾಲ್ ಭತ್ತ ರೈತರ ಹೆಸರಿನಲ್ಲಿ ಇಟ್ಟಿರುವುದು ಬೆಳಕಿಗೆ ಬಂದಿದೆ. ಈ ಬಗೆ ನಾನು ಜಿಲ್ಲಾಧಿಕಾರಿಗಳಿಗೆ, ಮತ್ತು ಇಲಾಖೆಯ ಡೈರೆಕ್ಟರೂಗಳಿಗೆ ಆದೇಶ ಕೊಟ್ಟಿದ್ದೇನೆ. ವಾಸ್ತವಿಕವಾಗಿ ರೈತರು ಭತ್ತವನ್ನು ಇಟ್ಟುಕೊಂಡಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬಾರದೆಂದು ಹೇಳಿದ್ದೇನೆ. 120 ಜನ ಉಚ್ಚನ್ಯಾಯಾಲಯದ ಮೊರೆ ಹೋಗಿದ್ದಾರೆ. ಅದನ್ನು ತೆರವು ಮಾಡಿಸಿ, ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ.--ಮಾನ್ಯ ಅಧ್ಯಕ್ಷರೆ, ನನ್ನ ವಿಟ್ಲ ಕ್ಷೇತ್ರದ ಎಲ್ಲಾ ಕಾಲೇಜುಗಳಲ್ಲಿ ಪ್ರಾಂಶುಪಾಲರು ಇಲ್ಲ ಕರ್ನಾಡು ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಒಂದು ತಿಂಗಳಲ್ಲಿ ಮೂರು ಪ್ರಿನ್ಸಿಪಾಲರು ನೇಮಕವಾಗಿದ್ದಾರೆ. ಶ್ರೀ ತಿಮ್ಮ ಮಡಿವಾಳ ಎನ್ನುವವರನ್ನು ದಿನಾಂಕ 20-12-1983 ರಲ್ಲಿ ಪ್ರಿನ್ಸಿಪಾಲರಾಗಿ ಹಾಕಲಾಯಿತು. ಅವರು ದಿನಾಂಕ.--30-12-1983ರಂದು ಪ್ರಿನ್ಸಿಪಾಲರಾಗಿ ಅಧಿಕಾರ ಸ್ವೀಕರಿಸಿಕೊಂಡರು. ಆ ಕಾಲೇಜಿನ ಪ್ರಿನ್ಸಿಪಾಲರ ನೇಮಕಾತಿಯನ್ನು ಪುನಃ ರದ್ದು ಮಾಡಲಾಗಿದೆ. ಅವರನ್ನು ಅಲ್ಲಿಂದ ಬೈಂದೂರಿಗೆ ವರ್ಗಾವಣೆ ಮಾಡಿರುತ್ತಾರೆ. ಅವರ ಜಾಗಕ್ಕೆ ಶ್ರೀ ಸೀತಾರಾಮ ಭಟ್ಟ ಎಂಬುವರನ್ನು ಪ್ರಿನ್ಸಿಪಾಲರೆನ್ನಾಗಿ ಹಾಕಿದ್ದಾರೆ. ಒಂದು ತಿಂಗಳಲ್ಲಿ ವಿತಕ್ಕೆ ಈ ರೀತಿಯ ಅವ್ಯವಸ್ಥೆ ಮಾಡಲಾಯಿತು. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ನನ್ನ ವಿಟ್ಲ ಕ್ಷೇತ್ರ ಕುರ್ನಾಡು ಜೂನಿಯರ್ ಕಾಲೇಜಿಗೆ ಶ್ರೀ ತಿಮ್ಮ ಮಡಿವಾಳರನ್ನೇ ಪ್ರಾಂಶುಪಾಲರಾಗಿ ಮುಂದುವರಿಸಬೇಕಾಗಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಧನಂಜಯಕುಮಾರ್.--ಸ್ವಾಮಿ, ಪ್ರತಿ ತಿಂಗಳು ಇದೇ ರೀತಿಯಾಗಿ ಪ್ರಿನ್ಸಿಪಾಲ್‌ರವರನ್ನು ವರ್ಗಾವಣೆ ಮಾಡುತ್ತಿದ್ದಾರೆ. ಅನೇಕ ಕಡೆಗಳಲ್ಲಿ ಪ್ರಿನ್ಸಿಪಾಲ್‌ರವರೇ ಇಲ್ಲ. ಇದರಿಂದ ವಿದ್ಯಾರ್ಥಿಗಳು ಮುಷ್ಕರ ಮಾಡುವುದಕ್ಕೆ ಪ್ರಾರಂಭಮಾಡಿದ್ದಾರೆ.

ಅಧ್ಯಕ್ಷರು.--ಈಗ ಮಂತ್ರಿಗಳು ಇಲ್ಲಿ ಇಲ್ಲ.....

ಶ್ರೀ ವಿ. ಧನಂಜಯಕುಮಾರ್.--ಸ್ವಾಮಿ ಅಲ್ಲಿ ವಿದ್ಯಾರ್ಥಿಗಳು ಯಾವ ಮಟ್ಟಕ್ಕೆ ಹೋಗಿದ್ದಾರೆ ಎಂದರೆ....

ಅಧ್ಯಕ್ಷರು --ನಾನು ಪದೇ ಪದೇ ಹೇಳುವುದಕ್ಕೆ ತಾವು ಅವಕಾಶ ಮಾಡಿಕೊಡಬೇಡಿ. ಇಲ್ಲಿ ಮಂತ್ರಿಗಳು ಇಲ್ಲ, ನಿಯಮ 334 ರಲ್ಲಿ ತಕ್ಷಣ ಉತ್ತರ ಬೇಕು ಎಂದರೆ ಹೇಗೆ ? ನಿಮಗೆ ಇನ್ನು ಬೇರೆ ಬೇರೆ ನಿಯಮಗಳಿವೆ ಅವುಗಳ ಪ್ರಕಾರ ನೀವು ನೋಟೀಸ್ ಕೊಟ್ಟರೆ ನಾನು ನಿಮ್ಮ ಪರವಾಗಿ ಒತ್ತಾಯ ಮಾಡುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಧನಂಜಯಕುಮಾರ್.—ಇದು ಬಹಳ ಗಂಭೀರವಾದ ಪ್ರಶ್ನೆ ....

Mr. Speaker.—Under rule 334 I cannot force the Minister to make a reply. I cannot help it. You please send notice under different rules.

(V) ಲೋಕೋಪಯೋಗಿ ಇಲಾಖೆಯ ಅಸಿಸ್ಟೆಂಟ್ ಇಂಜಿನೀಯರ್ ಮತ್ತು ಅಸಿಸ್ಟೆಂಟ್ ಎಕ್ಸಿಕ್ಯೂಟಿವ ಎಂಜಿನಿಯರ್ಸ್ ವೇತನದಲ್ಲಿ ತಾರತಮ್ಯವಾಗಿರುವುದರಿಂದ ಸತ್ಯಾಗ್ರಹ ಮಾಡುತ್ತಿರುವ ಬಗ್ಗೆ.

ಡಾ|| ವಿ. ಎಸ್. ಆಚಾರ್ಯ.---ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದ ವಿವಿಧ ಅಭಿವೃದ್ಧಿ ಕಾರ್ಯಗಳು ಸುಸೂತ್ರವಾಗಿ ನಡೆಯಬೇಕಾದರೆ ಲೋಕೋಪಯೋಗಿ ಇಲಾಖೆಯೇ ಮುಖ್ಯವಾದುದು ಎಂದು ಎಲ್ಲರಿಗೂ ಗೊತ್ತಿರುವ ಸಂಗತಿ ರಸ್ತೆ ಕೆಲಸ ಇರಬಹುದು, ಸಣ್ಣ ನೀರಾವರಿ ಇರಬಹುದು. ಬೃಹತ್ ನೀರಾವರಿ ಕಾರ್ಯ ಇರಬಹುದು ಇವೆಲ್ಲಾ ಲೋಕೋಪಯೋಗಿ ಇಲಾಖೆಯಿಂದಲೇ ಆಗಬೇಕು. ಈ ಕೆಲಸಗಳು ಸುಸೂತ್ರವಾಗಿ ನಡೆಯಬೇಕಾಗಿದ್ದರೆ ಅಡಳಿತಯಂತ್ರ ಸರಿಯಾಗಿ ಇರಬೇಕು. ಲೋಕೋಪಯೋಗಿ ಇಲಾಖೆಯ ಅಸಿಸ್ಟೆಂಟ್ ಇಂಜಿನೀಯರ್, ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳು ಈ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ. ಅವರ ಸೇವಾ ನಿಯಮ ಸರಿಯಾಗಿ ಇರಬೇಕು ಕಳೆದ 20 ವರ್ಷಗಳಿಂದ ಅಸಿಸ್ಟೆಂಟ್ ಇಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳು ತಮ್ಮ ವೇತನದಲ್ಲಿ ತಾರತಮ್ಯ ಇರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಲೇ ಇದ್ದಾರೆ. ಆದರೆ ಇದರಲ್ಲಿ ಸರಿಯಾದ ಪರಿಹಾರ ಸಿಕ್ಕದೇ ಇದುದರಿಂದ ನಿನ್ನೆಯಿಂದ 1300 ಜನ ಅಸಿಸ್ಟೆಂಟ್ ಎಂಜಿನಿಯರ್ ಮತ್ತು 400 ಜನ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳು ನಮ್ಮ ರಾಜ್ಯದ ಮೂಲೆಗಳಲ್ಲಿ ಇರತಕ್ಕವರು ಬೆಂಗಳೂರಿಗೆ ಬಂದು ಮುಷ್ಕರ ಹೂಡುತ್ತಿದ್ದಾರೆ. ಕಳೆದ 20 ವರ್ಷಗಳಿಂದ ವೇತನದಲ್ಲಿರತಕ್ಕ ವ್ಯತ್ಯಾಸವನ್ನು ಸರಿಪಡಿಸಬೇಕು ಎಂದು ಮುಷ್ಕರ ಮಾಡುತ್ತಿದ್ದಾರೆ. ನಮ್ಮ ಮುಖ್ಯಮಂತ್ರಿಯವರು ಹೆದ್ದಾರಿ ಸೇತುಬಂಧನ, ಗಂಗಾಕಲ್ಯಾಣ, ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್ ಮುಂತಾದ ಅನೇಕ ಕಾರ್ಯಗಳನ್ನು ರೂಪಿಸಿದ್ದಾರೆ. 1960ನೇ ಇಸವಿಯವರೆಗೂ ಪದವೀಧರ ಇಂಜಿನಿಯರುಗಳಿಗೆ ಪದವೀಧರ ಡಾಕ್ಟರ್‌ಗಳಿಗಿಂತ ಹೆಚ್ಚಿನ ವೇತನ ಸಿಗುತಿತ್ತು. ನಾನು ಒಬ್ಬ ಡಾಕ್ಟರ್ ಆಗಿರುವುದರಿಂದ ಇದು ನನಗೆ ಗೊತ್ತಿದೆ. ಇದು 1969ರ ನಂತರ ಬಹಳ ಕಡಿಮೆ ವೇತನ ಬರುವುದಕ್ಕೆ ಪ್ರಾರಂಭವಾಯಿತು. ನಂತರ ಪೈಕಮೀಷನ್‌ನಲ್ಲೂ ಇವರಿಗೆ ನ್ಯಾಯ ಸಿಕ್ಕದೇ ಅದೇ ಅನ್ಯಾಯ ಮುಂದುವರೆಯಿತು. ಅನಂತರ ತಮಗೆ ಸರಿಯಾದ ವೇತನ ಸಿಕ್ಕುತ್ತಿಲ್ಲವೆಂದು ತೀವ್ರವಾಗಿ ಸರ್ಕಾರದ ಗಮನವನ್ನು ಸೆಳೆದಾಗ ಸನ್ಮಾನ್ಯ ಶ್ರೀ ದೇವರಾಜ್‌ಅರಸ್ ಆವರು 1-1-80ರಿಂದ ಈ ವೇತನ ತಾರತಮ್ಯವನ್ನು ಸರಿಪಡಿಸಿ ಕೊಡುವುದಾಗಿ ಭರವಸೆ ಕೊಟ್ಟಿದ್ದರು. 1-1-80 ರಿಂದ ಸರ್ಕಾರ ಬದಲಾದ ಮೇಲೆ ಅವರು ಶ್ರೀ ದೇವೇಗೌಡರವರನ್ನು ಮತ್ತು ಶ್ರೀ ಎಂ. ಚಂದ್ರಶೇಖರ್‌ರವರನ್ನು ಕಂಡು ಕೇಳಿದಾಗ ಈಗಿನ ಲೋಕೋಪಯೋಗಿ ಸಚಿವರಾದ ಶ್ರೀ ದೇವೇಗೌಡರು ಅದಷ್ಟು ಬೇಗ ಇದನ್ನೆ ಬಗೆಹರಿಸುವುದಾಗಿ ಭರವಸೆ ಕೊಟ್ಟರು. ಸ್ವಾತಂತ್ರ್ಯ ಪೂರ್ವದಲ್ಲಿ.....

Mr Speaker.--You cannot make a speech under rule 334.

ಡಾ|| ವಿ. ಎಸ್. ಆಚಾರ್ಯ.---ಇನ್ನು ಒಂದೇ ಒಂದು ನಿಮಿಷದಲ್ಲಿ ಮುಗಿಸು ಬಿಡುತ್ತೇನೆ ನಾನು ಮುಖ್ಯ ಮಂತ್ರಿಯವರಿಗೆ ಒಂದು ಪತ್ರವನ್ನು ಬರೆದಿದ್ದೆ. ಅದಕ್ಕೆ ಮುಖ್ಯ ಮಂತ್ರಿಯವರು ಏನು ಉತ್ತರವನ್ನು ನನಗೆ ಕೊಟ್ಟಿದ್ದರು ಅದೇ ಉತ್ತರವನ್ನು ಯಾರು ನನಗೆ ಮನವಿಯನ್ನು ಕೊಟ್ಟಿದ್ದರು ಅವರಿಗೆ ಅದನ್ನು ಕಳುಹಿಸಿ ಕೊಟ್ಟಿದ್ದೇನೆ. ಈ ನ್ಯಾಯಬದ್ಧ ಬೇಡಿಕೆಗಳನ್ನು ಈಡೇರಿಸುತ್ತೇನೆ ಎನ್ನುವ ಭರವಸೆಯನ್ನು ನನಗೆ ಕಳುಹಿಸಿಕೊಟ್ಟಿದ್ದರು. ಆದರೆ ಅದು ಆಗಲಿಲ್ಲವೆಂದು ಫೆಬ್ರವರಿ ತಿಂಗಳಲ್ಲಿ ಬೆಂಗಳೂರಿಗೆ ಬಂದು ಉಪವಾಸ ಮುಷ್ಕರ ಮಾಡುತ್ತಿದ್ದಾರೆ. ಲೋಕೋಪಯೋಗಿ ಸಚಿವರು ಮತ್ತು ಮುಖ್ಯ ಮಂತ್ರಿ